



# ರೇಶ್ಮೆ ಹತ್ತಿಯ ಮರ!

**ಜನವರಿ– ಏಪ್ರಿಲ್ ಅವಧಿ ಬಾಂಬ್ಯಾಕ್ಸ್ ಹತ್ತಿ ಗಿಡದ ಹೂವಿನ ಸುಗ್ಗಿಯ ದಿನಗಳು. ಆಗ ಕೀಟ, ಪಕ್ಷಿಗಳು, ಜೇನು ಹುಳುಗಳು ಹೂವಿನ ಮಕರಂದ ಹೀರಲು ಬರುತ್ತವೆ. ಪರಾಗಸ್ಪರ್ಶ ಕ್ರಿಯೆಗೆ ಇವೆಲ್ಲ ತುಂಬ ಸಹಕಾರಿ.**

■ ಚಿತ್ರ-ಲೇಖನ: **ಸುಭಾಸ ಯಾದವಾಡ**

ಸಾರ್ವಜನಿಕ ಉದ್ಯಾನವನದಲ್ಲಿ ಈರಪ್ಪ ತೊರವಿ ಕೆಲವು ಕಾಯಿಗಳನ್ನು ಆಯ್ದುಕೊಳ್ಳುತ್ತಿದ್ದರು. ನಸು ಹಳದಿ ಬಣ್ಣದ ಗೇಣುದ್ದದ ಕಾಯಿಗಳು. ಏನೆಂದು ಕೇಳಿದರೆ, ಅವರಿಗೂ ಹೆಸರು ಗೊತ್ತಿರಲಿಲ್ಲ. 'ಇವುಗಳಲ್ಲಿ ನುಣುಪಾದ ಮೆತ್ತನೆಯ ಹತ್ತಿ ಇರುತ್ತದೆ. ಅದನ್ನು ಹತ್ತಿ ಅರಳೆಯೊಂದಿಗೆ ಕೂಡಿಸಿ ತಲೆದಿಂಬಿನಲ್ಲಿ ತುಂಬುತ್ತೇನೆ' ಎಂದರು.

ಸಸ್ಯಶಾಸ್ತ್ರದ ವಿದ್ಯಾರ್ಥಿಯಾದ ಪ್ರೇಮ್ ಡವಳಗಿಯವರಿಗೆ ಆ ಗಿಡ ತೋರಿಸಿದೆ. 'ಅದಕ್ಕೆ ಬಾಂಬ್ಯಾಕ್ಸ್ ಎನ್ನುತ್ತಾರೆ' ಎಂದರು. ಆಮೇಲೆ ಅಲ್ಲಲ್ಲಿ ಅಲ್ಪಸ್ವಲ್ಪ ಮಾಹಿತಿಯನ್ನು ಕಲೆ ಹಾಕುತ್ತಾ ಹೋದೆ. ನಿಜಕ್ಕೂ ಅಚ್ಚರಿಯಾಯಿತು– ಒಂದೊಂದು ಮರದ ಹಿಂದೆ ಎಷ್ಟೆಲ್ಲ ವೈಶಿಷ್ಟ್ಯಗಳಿರುತ್ತವೆಯಲ್ಲ!

ಸಮಶೀತೋಷ್ಣ ವಲಯದಲ್ಲಿ ಸಮೃದ್ಧವಾಗಿ ಬೆಳೆಯುವ ಈ ಗಿಡದ ಮೂಲ ದಕ್ಷಿಣ ಆಫ್ರಿಕಾ, ಭಾರತ, ಆಗ್ನೇಯ ಏಷಿಯಾ ಎನ್ನಲಾಗುತ್ತಿದೆ. ದಕ್ಷಿಣ ಚೀನಾ ಹಾಗೂ ಇಂಡೋ–ಮಲೇಶಿಯಾ ಇದರ ತವರು ಎನ್ನುವವರೂ ಇದ್ದಾರೆ. 1912ರಲ್ಲೇ ಅಮೆರಿಕಾಕ್ಕೆ ಈ ವೃಕ್ಷವನ್ನು ಪರಿಚಯಿಸಿ, ಮೊದಲ ಬಾರಿಗೆ ಅಲ್ಲಿ ನೆಡಲಾಯಿತಂತೆ. ಕನ್ನಡದಲ್ಲಿ ಇದನ್ನು 'ರೇಶ್ಮೆ ಹತ್ತಿ ಗಿಡ' ಎನ್ನುತ್ತಾರೆ. ಹಿಂದಿಯಲ್ಲಿ ಸೇಮಲ್ ಎಂದೂ, ಬಂಗಾಳಿಯಲ್ಲಿ ಶೆಮುಲ್ ಎಂದೂ ಕರೆಯುತ್ತಾರೆ. ಆದರೆ ಈ ಗಿಡ ಬಾಂಬ್ಯಾಕ್ಸ್ ಎಂದೇ ಎಲ್ಲೆಡೆ ಸುಪರಿಚಿತ.



ತುಂಬ ಆಕರ್ಷಕ ಕೆಂಪು ಬಣ್ಣದ ಹೂವುಗಳನ್ನು ಹೊಂದಿರುವುದರಿಂದ ಇದನ್ನು ಕೆಂಪು ಹತ್ತಿ ಗಿಡ ಎಂದೂ ಕರೆಯುತ್ತಾರೆ. ಇದರ ಕಾಯಿಯಲ್ಲಿರುವ ಹತ್ತಿಯ ಬಣ್ಣ ಮಾತ್ರ ಶುಭ್ರ ಬಿಳಿಯದು. ಜನವರಿಯಿಂದ ಏಪ್ರಿಲ್ ತಿಂಗಳಲ್ಲಿ ಇದು ಹೂವು ಬಿಡುತ್ತದೆ. ಆಗ ಬಹುತೇಕ ಎಲೆಗಳು ಉದುರಿದ್ದು, ಮರವೆಲ್ಲ ಕೆಂಪು ಹೂವುಗಳಿಂದ ಕಂಗೊಳಿಸುತ್ತದೆ. ಕೆಲವು ಜಾತಿಯ ಬಾಂಬ್ಯಾಕ್ಸ್ ಗಿಡಗಳು ಬಿಳಿ ಹೂವು ಬಿಡುವುದೂ ಉಂಟು.

ಜನವರಿ– ಏಪ್ರಿಲ್ ಅವಧಿಯಲ್ಲಿ ಸುಮಾರು 29 ದಿನಗಳು ಈ ಗಿಡದ ಹೂವಿನ ಸುಗ್ಗಿಯ ದಿನಗಳು. ಆಗ ಕೀಟ, ಪಕ್ಷಿಗಳು, ಜೇನು ಹುಳುಗಳು ಹೂವಿನ ಮಕರಂದ ಹೀರಲು ಬರುತ್ತವೆ. ಪರಾಗಸ್ಪರ್ಶ ಕ್ರಿಯೆಗೆ ಇವೆಲ್ಲ ತುಂಬ ಸಹಕಾರಿ. 6ರಿಂದ 7 ಅಂಗುಲ ಅಗಲವಿರುವ ಹೂವುಗಳು ಕೆಲವು ಕಡೆ ಗುಂಪಾಗಿ ಇದ್ದು, ಇನ್ನು ಕೆಲವು ಕಡೆ ಏಕಾಕಿಯಾಗಿಯೂ ಇರುತ್ತವೆ. ಪ್ರತಿಯೊಂದು ಹೂವು 5ರಿಂದ 7 ದಿನಗಳ ಕಾಲ ಅರಳಿದ್ದು ಆಮೇಲೆ ಬಾಡುತ್ತವೆ. ಹೂವಿನ ಸುಗ್ಗಿಯ 29 ದಿನಗಳಲ್ಲಿ ಮತ್ತೆ ಹೊಸ ಹೂವುಗಳು ಹುಟ್ಟಿ– ಅರಳಿ, ಗಿಡವು ಪುಷ್ಪವತಿಯಾಗುತ್ತದೆ. ಗಿಡದ ಕೆಳಗಿನ ನೆಲವೂ ಉದುರಿದ ಹೂವುಗಳಿಂದ ಕೆಂಪು ಬಣ್ಣಕ್ಕೆ ತಿರುಗಿರುತ್ತದೆ.

ಮಾರ್ಚ್– ಏಪ್ರಿಲ್ ನಂತರ ಬಹುತೇಕ ಹೂವುಗಳೆಲ್ಲ ಉದುರಿ ಹೋದ ಮೇಲೆ ಗಿಡ ಹಸಿರು ಎಲೆಗಳನ್ನು ಬಿಡಲು ಆರಂಭಿಸುತ್ತದೆ. ಅದರ ಜೊತೆಗೆ ಕಾಯಿಗಳು ಬಲಿಯತೊಡಗುತ್ತವೆ.

ಇದರ ಎಲೆಗಳೂ ತುಂಬ ವೈಶಿಷ್ಟ್ಯಪೂರ್ಣ. 5ರಿಂದ 10 ಸೆಂಟಿಮೀಟರ್ ಉದ್ದದ ಎಲೆಗಳು ತುದಿಯಲ್ಲಿ ಚೂಪಾಗಿರುತ್ತವೆ. ಒಂದು ದೇಟಿನಲ್ಲಿ 5ರಿಂದ 9 ಎಲೆಗಳಿದ್ದು ಅವು ಮನುಷ್ಯನ ಹಸ್ತದಲ್ಲಿರುವ ಬೆರಳುಗಳಂತೆ ಕಾಣುತ್ತವೆ. ಕಾಯಿಗಳು 6ರಿಂದ 10 ಅಂಗುಲ ಉದ್ದವಿದ್ದು ಪಕ್ವವಾಗಿ ಕೆಳಗೆ ಉದುರಿ ಬೀಳುತ್ತವೆ. ಕೆಲವೊಮ್ಮೆ ಅಲ್ಲಿಯೇ ಬಿರಿದು ಒಡೆಯುತ್ತವೆ. ಈ ಕಾಯಿಗಳಲ್ಲಿರುವ ಅತ್ಯಂತ ಹಗುರವಾದ ರೇಶಿಮೆಯಂತಹ ನುಣುಪಾದ ಹತ್ತಿ ಬಿಡಿಬಿಡಿಯಾಗಿ ಸಣ್ಣ ಗಾಳಿಗೂ ತೂರಿ ಹೋಗುತ್ತದೆ. ಇದರಲ್ಲಿರುವ ಎಳೆ ಸಾಮಾನ್ಯ ಹತ್ತಿಯಲ್ಲಿರುವ ಎಳೆಗಿಂತ ಬಹಳ ಚಿಕ್ಕದು. ಹೀಗಾಗಿ ಅದನ್ನು ನೂಲಾಗಿಸಿ ಜವಳಿ ಉದ್ದಿಮೆಯಲ್ಲಿ ಬಳಸಲು ಸಾಧ್ಯವಾಗಿಲ್ಲ.

ಈ ಮರದ ನಾಲ್ಕು ಪ್ರಭೇದಗಳಿದ್ದು, ಬಾಂಬ್ಯಾಕ್ಸ್ ಸೀಬಾ ಸಮಶೀತೋಷ್ಣ ವಲಯದ ಅಚೀಚಿನ ಪ್ರದೇಶಗಳಲ್ಲೂ ಕಂಡುಬರುತ್ತದೆ. ಸಾಮಾನ್ಯವಾಗಿ 20ರಿಂದ 40 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಹಳೆಯ ಮರಗಳು 60 ಮೀಟರ್ ಎತ್ತರಕ್ಕೂ ಬೆಳೆದದ್ದಿದೆ. ಕಾಂಡದ ಸುತ್ತಳತೆ ಮೂರು ಮೀಟರಗಳಷ್ಟು.

ಬಾಂಬ್ಯಾಕ್ಸ್ ಕಾಯಿಗಳ ರೇಶ್ಮೆ ಹತ್ತಿಯಲ್ಲಿ ಅಡಗಿದ ಕಂದು ಬಣ್ಣದ ಬೀಜಗಳಿಂದ ಈ ಗಿಡವನ್ನು ಬೆಳೆಸಬಹುದು. ಈ ಮರದ ಉದ್ದನೆಯ ರೆಂಬೆಗಳನ್ನು ಕತ್ತರಿಸಿ ನೆಟ್ಟು ಮರವನ್ನು ಅಭಿವೃದ್ಧಿಪಡಿಸಬಹುದು. ವಿಶೇಷವಾಗಿ ದೊಡ್ಡ ಉದ್ಯಾನವನಗಳಲ್ಲಿ ಈ ಮರಗಳನ್ನು ಬೆಳೆಯುತ್ತಾರೆ. ■